ದಿನಾಂಕ 19.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ಶ್ರೀ.ಕೆ.ಪಿ.ಬಿ. ವಕೀಲರಿಂದಃ-**

ನನ್ನ ಮಾವ ಚೆಲುವಯ್ಯರವರು ಜೀವಂತವಿದ್ದಾಗ ನನ್ನ ತಾಯಿಯು ಸರ್ವೆ ನಂ. 98/1 ರ ಪೈಕಿ 1 ಎಕರೆ 33 ಸೆಂಟ್ಸ್ ಹಾಗೂ ಸರ್ವೆ ನಂ. 100/3 ರಲ್ಲಿ 7 ಸೆಂಟ್ಸ್ ಜಮೀನು ಮತ್ತು ಅದೇ ಸರ್ವೆ ನಂಬರಿನಲ್ಲಿನ ಎರಡುವರೆ ಸೆಂಟ್ಸ್ ಜಮೀನಿನಲ್ಲಿ ನನ್ನ ತಾಯಿಯು ಸ್ವಾ ಧೀನದಲ್ಲಿ ಇದ್ದರು ಎಂದರೆ ಸರಿ. ದಾವೆಯನ್ನು ದಾಖಲಿಸುವುದಕ್ಕಿಂತ ಮೊದಲು ನನ್ನ ತಾಯಿಯು ಭಾಗಂಶ ನೀಡುವಂತೆ ಕೋರಿ ಪ್ರತಿವಾದಿಗಳಿಗೆ ನೋಟಿಸನ್ನು ನೀಡಿರಲಿಲ್ಲ. ದಾವೆಯನ್ನು ದಾಖಲಿಸಿದ ಬಳಿಕ ನಾವು ಮತ್ತು ಪ್ರತಿವಾದಿಗಳು ಅನ್ಯೋನ್ಯವಾಗಿರುವುದಿಲ್ಲ. ದಾವೆಯನ್ನು ದಾಖಲಿಸುವುದಕ್ಕಿಂತ 2 ತಿಂಗಳು ಮೊದಲು ನನ್ನ ತಾಯಿಯು ಪ್ರತಿವಾದಿಗಳ ಬಳಿ ದಾವಾ ಸ್ವತ್ತುಗಳಲ್ಲಿ ಭಾಗಂಶ ನೀಡುವಂತೆ ಮೌಖಿಕವಾಗಿ ಕೇಳಿದ್ದರು. 1ನೇ ಪ್ರತಿವಾದಿಯು ನಮ್ಮ ಮನೆಗೆ ಬಂದಂತಹ ಸಂದರ್ಭದಲ್ಲಿ ನನ್ನ ತಾಯಿಯು ಭಾಗ ನೀಡುವಂತೆ ಅವರ ಬಳಿ ಕೇಳಿದ್ದರು. ನನ್ನ ತಾಯಿಯು ಪ್ರತಿವಾದಿಗಳ ಬಳಿ ಭಾಗಂಶವನ್ನು ನೀಡುವಂತೆ ಕೇಳದೆ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ತಾಯಿಯು ವಾಸವಿರುವ ಮನೆಯು ಸರ್ವೆ ನಂ. 100/3 ರಲ್ಲಿ ಇದೆ. ಸದರಿ ಮನೆಯನ್ನು ನನ್ನ ತಾಯಿಯು ಸುಮಾರು 40 ವರ್ಷಗಳ ಹಿಂದೆ ಕಟ್ಟಿಸಿರುತ್ತಾರೆ. ನಮ್ಮ ಮನೆಯ ಸುತ್ತಲೂ ಸುಮಾರು 1 ಎಕರೆ 33 ಸೆಂಟ್ಸ್ ಜಾಗ ಇದೆ. ಸದರಿ ಜಾಗದಲ್ಲಿ ಕಾಫಿ ಬೆಳೆ ಇದೆ. ನಾವು ಮನೆಯನ್ನು ಕಟ್ಟಿದಾಗಿನಿಂದಲೂ 1 ಎಕರೆ 33 ಸೆಂಟ್ಸ್ ಜಾಗದ ಸ್ವಾ ಧೀನಾನುಭವದಲ್ಲಿ ಇದ್ದೇವೆ. ಸದರಿ 1 ಎಕರೆ 33 ಸೆಂಟ್ಸ್ ಜಾಗ ಮೂಲತಃ ನನ್ನ ಅಜ್ಜನಾದ ವೆಂಕಟಪ್ಪರವರಿಗೆ ಸೇರಿದ್ದಾಗಿದೆ. ನನ್ನ ಅಜ್ಜ ಮೃತರಾದ ಬಳಿಕ ಸದರಿ ಜಮೀನಿನ ಖಾತೆಯು ನನ್ನ ಮಾವನಾದ ಚೆಲುವಯ್ಯರವರ ಹೆಸರಿಗೆ ದಾಖಲಾಗಿತ್ತು.

ನನ್ನ ತಾಯಿಯ ವಿವಾಹವು 1969 ನೇ ಇಸವಿಯಲ್ಲಿ ಆಗಿರುತ್ತದೆ. ನನ್ನ ತಾಯಿಯ ವಿವಾಹವನ್ನು ನನ್ನ ಮಾವನಾದ ಚೆಲುವಯ್ಯರವರು ಮಾಡಿರುತ್ತಾರೆ. ವಿವಾಹವನ್ನು ನನ್ನ ಮಾವನವರು ಸಂಪ್ರದಾಯದಂತೆ ಮಾಡಿರುತ್ತಾರೆ ಎಂದರೆ ಸರಿ. ಚೆಲುವಯ್ಯರವರು ನನ್ನ ತಾಯಿಯ ವಿವಾಹವನ್ನು ಅದ್ದೂರಿಯಾಗಿ ಮಾಡಿ ಅವರಿಗೆ ಹಣ ಮತ್ತು ಮೇಲ್ಕಂಡ 1 ಎಕರೆ 33 ಸೆಂಟ್ಸ್ ಜಾಗವನ್ನು ಅವರಿಗೆ ನೀಡಿದ್ದರು ಎಂದರೆ ಸರಿಯಲ್ಲ. ದಿಃ 10.11.2004 ರ ಕ್ರಯಪತ್ರದ ಪ್ರಕಾರ ನನ್ನ ತಾಯಿ ಮತ್ತು ಪ್ರತಿವಾದಿಗಳ ನಡುವೆ ಯಾವುದೇ ಹಣದ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರವನ್ನು ಪಹಣಿ ಪತ್ರಿಕೆಯನ್ನು ನನ್ನ ತಾಯಿಗೆ ಹೆಸರಿಗೆ ಮಾಡಿಸಿಕೊಳ್ಳುವ ಉದ್ದೇಶದಿಂದ ಹಾಗೂ ಬ್ಯಾಂಕಿನಲ್ಲಿ ಸಾಲ ಪಡೆಯುವ ಉದ್ದೇಶದಿಂದ ನೋಂದಣಿ ಮಾಡಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ತಾಯಿಯು ತನ್ನ ವಿವಾಹದ ಸಂದರ್ಭದಲ್ಲಿಯೇ ತನ್ನ ಹಿಸ್ಸೆಯ ಬಾಬ್ತು ಹಣ ಮತ್ತು 1 ಎಕರೆ 33 ಸೆಂಟ್ಸ್ ಜಮೀನನ್ನು ಪಡೆದುಕೊಂಡಿರುವುದರಿಂದ ಈ ದಾವೆಯನ್ನು ಕೋರಿರುವಂತಹ ಪರಿಹಾರವನ್ನು ಪಡೆಯಲು ಅವರು ಅರ್ಹರಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u>- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ)

ಸಹಿ
ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.